Regd. No M. 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯುರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 30 ಸಂಚಿಕೆ 259 | ಮಂಗಳವಾರ 10—6—47 | ಬಿಡಿ ಪ್ರತಿ 3 ಪೈ

ಶ್ರೀ ದ್ವಾರಕಾ ಜಗದ್ಗುರುಗಳು

ದೂರ್ವಾಸಪುರ ಜೂ 8

ಇದೇ ಜ್ಯೇಷ್ಠ ಬಹುಳ ದಶಮಿಯ ದಿನ ಶ್ರೀ ಮಠದಲ್ಲಿ ಗಂಗಾಸಮಾರಾಧನೆ ಮತ್ತು ಆಂಜನೇಯ ಪ್ರತಿಷ್ಠಾಮಹೋತ್ಸವವು ಜರುಗುವುದು. ಆ ಶಾಷ್ಠ ಶು. ಬಿದಿಗೇ ದಿನ ಶ್ರೀಗಳವರ ಸವಾರಿಯು ಗೋಕರ್ಣದ ಮಾರ್ಗವಾಗಿ ಬೊಂಬಾಯಿ, ಉತ್ತರ ಗುಜರಾತಿಗೆ ಚಿತ್ಕೈಸುವುದು.

ಶ್ರೀರಂಗಪಟ್ಟಣ

ಸ್ವಂ ಸು] ಜೂ 8

ಈ ಊರಿನಲ್ಲಿ ಹೊಸದಾಗಿ ಕಟ್ಟುತ್ತಿರುವ ಶ್ರೀ ಕಾವೇರಿ ವೆಂಕಟರಮಣ ಸ್ವಾಮಿಯವರ ದೇವಸ್ಥಾನದ ಕಟ್ಟಡಕ್ಕಾಗಿ ಇಲ್ಲಿಯ ಕಂಟ್ರಾಕ್ಟರಾದ ಶ್ರೀ ಗುಂಡಪ್ಪನವರು ಕಟ್ಟಡಕ್ಕೆ ಬೇಕಾದ ಸಾಮಾನು ಪೂರ್ವಕವಾಗಿ 25—0—0 ರೂಪಾಯಿ ಬೆಲೆ ಬಾಳುವ ಸಾಮಾನುಗಳನ್ನು ಉದಾರವಾಗಿ ಕೊಟ್ಟಿದ್ದಾರೆ. ಮತ್ತು ಮೇಲ್ಕುಂಡ ದೇವಸ್ಥಾನಕ್ಕೆ ಪೈಂಜುರಾಕ್ಸು ಮುಂಜೆಸ್ವರಿ ರೈಸು ಮಿಲ್‌ನವರು 5 ರೂಪಾಯಿಗಳನ್ನು ಕೊಟ್ಟಿರುತ್ತಾರೆ.

ವಿವಾಹ ಮಹೋತ್ಸವ

ಮೈಸೂರು ಜೂ 8 — ರಾಜಧಾನಿಯ ಸುಪ್ರಸಿದ್ಧ ಅಡ್ವೊಕೇಟರಾದ ಶ್ರೀಮಾನ್ ಎಂ. ಎಸ್. ರಂಗನಾಥರವರು ತಮ್ಮ ಪುತ್ರಿ ಚಿ|| ಸೌ|| ಇಂದಿರಮ್ಮನನ್ನು ಶಿವಮೊಗ್ಗಾದಲ್ಲಿರುವ ಅಡ್ವೋಕೇಟ್ ಮು|| ರಾ|| ಜಿ. ಶ್ರೀನಿವಾಸೈಯ್ಯಂಗಾರ್ಯರ ಅಣ್ಣಂದಿರು ಜಿ. ರಾ ಪೂಸುಜ್ಜಿಯ್ಯಂಗಾರ್ಯರ ಪುತ್ರ ಚಿ|| ರಾ|| ಜಿ. ಆರ್. ಶೇಷಾದ್ರಿಗಳಿಗೆ ಕೊಟ್ಟು ವಿವಾಹ ಮಹೋತ್ಸವವನ್ನು ವೈಭವದಿಂದ ನೆಂವೇರಿಸಿದರು,

ತಿದ್ದುಪಡಿ

ಸತ್ಯವಾದಿಯ 251 ನೇ ಸಂಚಿಕೆ ತಾ|| 2—6—47 ಪ್ರಬೋಧ ಪುಟದಲ್ಲಿ ಪಂ|| ನೆಹರೂರಿಗೆ ತಂತಿ ಎಂಬ ಹೆಡ್ಡಿಂಗಿನಲ್ಲಿ ಪ್ರಕಟಿಸಿರುವ ವಿಷಯದಲ್ಲಿ ' ವಂದಿಸಿ ತಂತೀ ಕಳಿಸಿದರು. ' ಎಂದು ಮುದ್ರಿಸಲ್ಪಟ್ಟಿರುವುದನ್ನು ' ಸಂತೋಷ ವ್ಯಕ್ತಪಡಿಸಿ ತಂತೀ ಕಳಿಸಿದರು ಎಂದು ತಿದ್ದುಕೊಳ್ಳಬೇಕಾಗಿ ಕೋರಿಕೆ.

Edited, Printed and Published by M. S Krishna Rao at the Satyvadi Press Chamara Agrahar, Mysore.

ಪ್ರ. ಪ್ರ. ಸಭೆ ಬೆಂ. ಜೂ 8

ರಾಜ್ಯಾಂಗ ಸಭೆಗೆ ಮೈಸೂರು ಸೇರಿಲ್ಲ !

(ಸ್ವಂತ ವಿಶೇಷ ಪ್ರತಿನಿಧಿಯಿಂದ)

ಡಾ|| ರಾಯರವರ ಅಧ್ಯಕ್ಷತೆಯಲ್ಲಿ ಈ ದಿವಸ ಸಭೆ 12 ಗಂಟೆಗೆ ಸೇರಿತು.

ಸರ್ಕಾರದ ನಾನಾ ಶಾಖೆಗಳ ಪ್ರಮುಖ ಕಾರ್ಯದರ್ಶಿಗಳಲ್ಲಿ ಹಲವರು ಮೊನ್ನೆ ಶನಿವಾರ ಮಧ್ಯಾಹ್ನ ಈ ಸಭೆಯಲ್ಲಿ ಹಾಜರಿರದೆ ಕದ್ದುರೆ ಜೂಛಿಗೆ ಹೊರಟು ಹೋಗಿದ್ದುದು ವಿಷಾದಕರ. ಜನ ಸೇವೆಗಾಗಿ ನಾವು ಈ ಸಭೆಯಲ್ಲಿ ಜಾಗವಹಿಸಿದ್ದ ಸಮಯದಲ್ಲಿ ಅವರುಗಳು ಜೂಜಾಡಲು ಹೋಗಿದ್ದುದು ಬಹಳ ತಪ್ಪು. ಆ ಸ್ಥಳದಲ್ಲಿ ಅವರುಗಳು ಇದ್ದುದ್ದನ್ನು ಭಾವಚಿತ್ರ ತೆಗೆಯಲಾಗಿದೆ. ಈ ಬಗ್ಗೆ ಸರ್ಕಾರ ಸೂಕ್ತವಾದ ಕಾರ್ಯಕ್ರಮ ಕೈಗೊಳ್ಳಬೇಕು.

ಎಂದು ಕಾಂಗ್ರೆಸ್ ಪಕ್ಷದ ಪ್ರಮುಖ ' ಛಾವಟಿ ' ಶ್ರೀ ಎಂ. ವಿ. ಕೃಷ್ಣಪ್ಪನವರು ಅಧ್ಯಕ್ಷರ ಗಮನಕ್ಕೆ ತಂದರು.

ಈ ವಿಷಯ ಬಹಳ ಗಂಭೀರವಾದದ್ದು. ಸರ್ಕಾರೀ ಅಧಿಕಾರಿಗಳು ಈ ರೀತಿ ಮಾಡುವುದು ತಪ್ಪು. ಅವರುಗಳನ್ನು ವಿಚಾರಿಸಿದೆ ಜೂಜಾಡಲು ನಾವು ಹೋಗಿರಲಿಲ್ಲ. ಭಾವಚಿತ್ರವನ್ನು ಶ್ರೀ ಎಂ. ವಿ. ಕೃಷ್ಣಪ್ಪನವರು ಕಳುಹಿಸಿಕೊಡಲಿ. ಸತ್ಯವಿದ್ದರೆ ಸರಿಯಾದ ಕಾರ್ಯಕ್ರಮ ಕೈಗೊಳ್ಳುತ್ತೇವೆ— ಎಂದು ಅಧ್ಯಕ್ಷರು ತಿಳಿಸಿದರು.

ನಾನು ಭಾವ ಚಕ್ರವನ್ನು ತೋರಿಸಲು ಪ್ರಯತ್ನಿಸುತ್ತೇನೆ— ಎಂದು ಶ್ರೀ ಎ. ಕೃಷ್ಣಪ್ಪ ತಿಳಿಸಿದರು.

ರಾಜ್ಯಾಂಗ ಸಭೆ ಮೈಸೂರು

ಭಾರತ ರಾಜ್ಯಾಂಗ ಸಭೆಯಲ್ಲಿ ಮೈಸೂರು ಭಾಗವಹಿಸುವುದಿಲ್ಲ ಹಾಗೆಂದು ತಂತೀ ವಾರ್ತೆ ಬಂದಿದೆ —ಎಂದು ಶ್ರೀ ಎಂ. ಶಂಕರಲಿಂಗೇಗೌಡರು ತಿಳಿಸಿದರು.

* ನಾವು ರಾಜ್ಯಾಂಗ ಸಭೆಯಲ್ಲಿ ಏಕೆ ಭಾಗವಹಿಸಬೇಕು. ಹಾಗೆ ಭಾಗವಹಿಸುವುದರಿಂದ ಬರುವುದಾದ ಪುರುಷಾರ್ಥವೇನು ? — ಎಂದು ಸದಸ್ಯರೊಬ್ಬರು ಕೂಗಿದರು,

* ಜೂ 3 ರ ತಾ|| 2 ರ ನಂತರ ಭಾರತ ರಾಜ್ಯಾಂಗ ಸಭೆಯಲ್ಲಿ ಮೈಸೂರು ಸೇರುವ ಬಗ್ಗೆ ದಿವಾನರು ಹೇಳಿಕೆ ಕೊಡುವುದಾದ ತಿಳಿಸಿದ್ದರು. ಹಾಗೂ ಒಂದು ವಾರ ಕಳೆಯಿತು. ರಾಜ್ಯಾಂಗ ಸಮಿತಿಯ ಕಾರ್ಯದರ್ಶಿಗಳಿಂದ ಸಂಸ್ಥಾನಗಳಿಗೆ, ಸಭೆಗೆ ಸೇರುವ ಬಗ್ಗೆ ಅಂತ್ಯ ನಿರ್ಧಾರ ಮಾಡಲು ಪ್ರಶ್ನಾವಳಿಕೆ ಬಂದಿದೆ. ಇಡೀ ಮೈಸೂರು ಜನತೆ ಈ ಬಗ್ಗೆ ಕಾತುರತೆಯಿಂದ ಇದೆ. ಈ ಅಧಿವೇಶನ ಮುಗಿಯುವ ನಡುವಿನಲ್ಲೇ ಮೈಸೂರಿನ ಭವಿಷ್ಯ ತಿಳಿಸಬೇಕು — ಎಂದು ಶ್ರೀ ಬಿ. ಎಸ್ ಗುಪ್ತ ತಿಳಿಸಿದರು.

* ದೆಹಲಿಯಿಂದ ದಿವಾನರು ಸ್ವರ ಬೇಕು ಅನಂತರ ಎಲ್ಲಾ ವಿಷಯಗಳು ಗೊತ್ತಾಗುವುವು — ಎಂದು ಅಧ್ಯಕ್ಷರು ತಿಳಿಸಿದರು.

ಪ್ರಾಸಗೀ ಮಸೂದೆಗಳು

1. ಶಾಸನ ಸಭಾ ಸದಸ್ಯರಾದ ಶ್ರೀ ಎಂ. ಎ. ಗೋಪಾಲಸ್ವಾಮಯ್ಯಂಗಾರ್‌ರವರು ಕಳುಹಿಸಿರುವ ಹಿಂದೂ ಮತದ ಅಂತರ ಜಾತಿ ವಿವಾಹ ಅಂಗೀಕಾರ ಮಸೂದೆಯ ಮೇಲೆ ತೀವ್ರ ಚ

(ಹಿಂದಿನ ಪುಟ ನೋಡಿ)

ಮದರಾಸು ಮಂತ್ರಿಗಳಿಗೆ ಕಪ್ಪು ಬಾವುಟ ಪ್ರದರ್ಶನ

ಅನಂತಪುರ ಜೂ 9— ಮದರಾಸು ಮಂತ್ರಿಗಳಾದ ಶ್ರೀ ಸೀತಾರಾಮರೆಡ್ಡಿ ಮತ್ತು ಶ್ರೀ ಚಂದ್ರಮೌಳಿಯವರು ಉರವಕೊಂಡಾಕ್ಕೆ ಶುಕ್ರವಾರ ಭೇಟಿ ಕೊಟ್ಟಾಗ ಕಪ್ಪು ಬಾವುಟ ಪ್ರದರ್ಶನವೂ ವಿರುದ್ಧ ಘೋಷಣವೂ ನಡೆಯಿತು. ಗುಂಟಕಲ್‌ನಿಂದ ಉರವಗೊಂಡೆಗೆ ಅವರು ಒರವಾಗ ದಾರಿಯುದ್ದಕ್ಕೂ ಹಳ್ಳಿಯವರು ನಿಂತಿದ್ದು ಕಪ್ಪು ಬಾವುಟ ಪ್ರದರ್ಶನ ನಡಿಸಿದರು ; ಮಾರನೇ ದಿನ ಶ್ರೀ ಚಂದ್ರಮೌಳಿಯವರು ಅನಂತಪುರದಲ್ಲಿ ಮುನಿಸಿಪಲ್ ವಾಚನಾಲಯದ ಶಂಖು ಸ್ಥಾಪನೆ ಮಾಡುವಾಗ್ಯೆ ಬಹು ಭದ್ರವಾದ ಪೋಲೀಸು ಕಾವಲು ಇಡಲಾಗಿದ್ದಿತು.

ವರ್ತಮಾನ ಸಂಗ್ರಹ

ಸಂಕಾರದಲ್ಲಿ ಲೀಗು ಕಡೆಯ ಮಂತ್ರಿ ಜೋಗೇಂದ್ರ ಮಂಡಲರು ಬಂಗಾಳದಲ್ಲಿ ನಡೆಸಿದ ಎಾಟಿಂಗಿನಲ್ಲಿ ಇವರ ಭಾಷಣ ಕೇಳಲು ಸಾವಿರಂಗಟ್ಟಿ ಜನರು ಬಂದಿದ್ದಾರೆಂದು ಪ್ರಚಾರ ಮಾಡಲಾಗಿತಷ್ಟೆ. ಇದರ ಗುಟ್ಟು ಇಷ್ಟೇ ! ಅವರ ಭಾಷಣ ಕೇಳಿ ಬಂದಿದ್ದವರಿಗೆಲ್ಲಾ ಉಚಿತರಾಗಿ ಬಟ್ಟೆ ಕೊಡಲಾಗುವುದೆಂದು ಆಶೆ ಹುಟ್ಟಿಸಿದ್ದರಂತೆ !

ಬೀಹಾರು — ಮಂತ್ರಿಗಳಿಗೆ ಭಾರಿ ಮನೆ ಕಟ್ಟಲು 25 ಲಕ್ಷ ರೂಪಾಯಿ ಬಡ್ಜೆಟ್ಟಿನಲ್ಲಿ ಸೇರಿಸಲಾಗಿದೆ.

ಡ್ಯಾನ್ಯೂಬು ನದಿಯು 1750 ಮೈಟಿ 7 ಬೇರೆ ಬೇರೆ ದೇಶಗಳಲ್ಲಿ ಹರಿಯುತ್ತಿರುವುದು.

ಸಿಂಗಪುರ ಜೂ 8 — ಭಾರತಕ್ಕೆ ಅಮೇರಿಕಾ ಸಹಾಯ ಮಾಡುವುದೆಂದು ಭಾರತದಲ್ಲಿ ಅಮೇರಿಕಾ ರಾಯಭಾರಿಯಾಗಿ ನೇಮಿಸಲ್ಪಟ್ಟು ಇಲ್ಲಿಗೆ ಬಂದಿರುವ ಮಿ|| ಗ್ರೇಡಿಯವರು ಹೇಳಿದ್ದಾರೆ.

ಕರಾಚಿ ಜೂ 9 — ಸಿಂಧ್ ವಿಶ್ವವಿದ್ಯಾಲಯಕ್ಕೆ ಕಾಂಗ್ರೆಸ್ ಬಹಿಷ್ಕರಿಸುವುದೆಂದು ತಿಳಿಯಬಂದಿದೆ

ಬ್ರಸೆಲ್ಸ್ ಜೂ 8 — ಕಾಗದದಲ್ಲಿ ಬಾಂಬುಗಳು ಈಚೆಗೆ ಸಿಕ್ಕಿರುವುದಾಗಿ ಪ್ರಕಟಿಸಲಾಗಿತ್ತಷ್ಟೆ. ಬೆಲ್ಜಿಯಂನಲ್ಲಿ ಅಂತಹ ಬಾಂಬುಗಳು ಸಾಗಿಸುತ್ತಿದ್ದ ಒಬ್ಬ ಹೆಂಗಸು ದಸ್ತಗಿರಿ ಮಾಡಲ್ಪಟ್ಟಿದ್ದಾಳೆ.

ಎಲ್ಲ ಸಂಸ್ಥಾನಗಳೂ ರಾಜ್ಯಾಂಗ ಸಭೆಗೆ ಸೇರಬೇಕು ಎಂಬುದಾಗಿ ನವದೆಹಲಿಯಲ್ಲಿ ಜೂ 8 ರಲ್ಲಿ ಜಯಪುರದ ಮತ್ತು ಬಿಕಾನೀರಿನ ಮುಖ್ಯಮಂತ್ರಿಗಳು ಜಂಟಿ ಮನವಿ ಹೊರಡಿಸಿದ್ದಾರೆ.

(1 ನೇ ಪುಟದಿಂದ ಮುಂದುವರಿದುದು)

ರ್ಚೆ ನಡೆದು, ಬಹುಮತದಿಂದ ಅಂಗೀಕೃತವಾಯಿತು.

2. ಶಾಸನಸಭಾ ಸದಸ್ಯರಾದ ಶ್ರೀ ಎಂ ಮಾದಯ್ಯನವರು ಕಳುಹಿಸಿರುವ ನಾಗರೀಕ ಅಶಕ್ತತೆ ನಿರ್ಮೂಲನ (ತಿದ್ದುಪಡಿ) ಅಂಗೀಕಾರ ಮಸೂದೆಯ ಮೇಲೆ ಚರ್ಚೆಯೇ ಇಲ್ಲದೆ, ಬಹುಮತದಿಂದ ಅಂಗೀಕೃತವಾಯಿತು.

ವಂದೇ ಮಾತರಂ ಪ್ರಕರಣ

ಸರ್ಕಾರೀ ಶಾಲೆ ಮುನಿಸಿಪಲ್ ಶಾಲೆ ಮತ್ತು ಏಡೆಡ್ ಶಾಲೆಗಳಲ್ಲಿ ಮುಸ್ಲಿಂ ಜನಾಂಗಕ್ಕೆ ಮನಸ್ತೋಷವಾಗುವಂತಹ 'ವಂದೇ ಮಾತರಂ' ಗೀತೆಯನ್ನು ಹಾಡಕೂಡದು — ಎಂಬ ಜ|| ಎ. ಜೆ. ಖಲೀಲ್ ನಿರ್ಣಯ ಚರ್ಚೆಗೆ ಬಂದಿತು.

ಜ|| ಎ. ಜೆ. ಖಲೀಲ್‌ರವರು ನಿರ್ಣಯವನ್ನು ಮಂಡಿಸುತ್ತಾ 'ವಂದೇ ಮಾತರಂ' ಹಾಡುವಿಕೆ ನಿಲ್ಲಬೇಕು, ನಮ್ಮ ರಾಷ್ಟ್ರಗೀತೆಯಾದ 'ಕಾಯೋ ಶ್ರೀ ಗೌರಿ' ಹೇಳೋಣ. ಮುಸ್ಲಿಂರಿಗೆ 'ವಂದೇಮಾತರಂ' ಗೀತೆ ಸಲ್ಲದ ಉಭಯ ಕೋಮುಗಳು ಶಾಂತ ಮನೋಭಾವದಿಂದಿರಬೇಕು. ಅದುದರಿಂದ 'ವಂದೇಮಾತರಂ' ಹಾಡುವಿಕೆ ನಿಲ್ಲಬೇಕು.

ಶ್ರೀ ಬಿ. ಎಕ್ ಗುಪ್ತರು ನಿರ್ಣಯವನ್ನು ವಿರೋಧಿಸುತ್ತಾ, ಮುಸ್ಲಿಂರು ಬೇರೆ ಜನಾಂಗ ಅವರಿಗೇ ಬೇರೆ ರಾಜ್ಯ ಬೇಕು' ಎಂಬ ಕೇಳಿಕೆ ಬರುತ್ತಿದೆ. ಮುಸ್ಲಿಂರು ಈ ಗೀತೆಯನ್ನು ಹಾಡಬೇಕೆಂಬ ಕಡ್ಡಾಯವಿಲ್ಲ. ಇಂದು ವಂದೇಮಾತರಂ ಬೇಡ ಎನ್ನುತ್ತಾರೆ. ನಾಳೆ ಅದು ಬೇಡ ಇದು ಬೇಡ ಎಂದು ಹೇಳುತ್ತಾರೆ. ಕೊನೆಗೆ ನಮಗೆ ಸಿಕ್ಕುವುದೆಂದರೆ 'ಸೊನ್ನೆ' ಇದೋ ಎಚ್ಚರಿಕೆ, ವಂದೇಮಾತರಂ ನಿಲ್ಲಬೇಕೆಂದು ಅಜ್ಞೆ ಬಂದರೆ ಶಕ್ತಸಾತ ಪಂಡಿತ! ಶಾಂತಿಭಂಗ ಸತ್ಯ! ಅರಾಜಕತೆಗೆ ಆಹ್ವಾನ! ಎಂದು ತಿಳಿಸಿದರು.

ಹಿಂದೂ ಮಹಾಸಭೆಯ ಸದಸ್ಯರೊಬ್ಬರು ಮಾತನಾಡುತ್ತಾ 'ವಂದೇಮಾತರಂ' ಗೀತೆಗೆ ಕೊಡಲಿ ಹಾಕಲು ನಮ್ಮ ಸಂಸ್ಥಾಸದಲ್ಲಿ ಮೊದಲು ಕೈಯ್ಯೆತ್ತಿದ ವ್ಯಕ್ತಿಯೆಂದರೆ ವಿದ್ಯಾಶಾಖೆಯಲ್ಲಿರುವ ಸರ್ಕಾರೀ ಸೇವಕ ಜ|| ಅಬ್ದುಲ್ ಮಹಾಬ್, ಬ್ರಿಟಿಷರು ಭಾರತದಲ್ಲಿ ತಾನು ಬೇಡಿಕೆ ಬಂದರೂ ಅದೇ ಬೇಡಿಕೆಯನ್ನು ಇಲ್ಲಿನವರೂ ಕೇಳುತ್ತಾರೆ. 'ವಂದೇಮಾತರಂ' ಭಾರತದ ಹಿರಿಮೆಯ ಗೀತೆ, 'ವಂದೇಮಾತರಂ' ಚಿರಾಯುವಾಗಿರಲಿ ಎಂದರು

ಮೈಸೂರು ಸಿಟಿ ಮುನಿಸಿಪಲ್ ಆಫೀಸ್

ನೋಸಫಿಕೇಷನ್ ನಂ. R8-491 / 46-47 ತಾರೀಖು 2-6-1947

ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ—

ಮೈಸೂರು ಸಿಟಿ ದೇವರಾಜ ಮಾರ್ಕೆಟ್ಟಿನಲ್ಲಿರುವ ಹೋಟಲು ಕಟ್ಟಡವನ್ನು 1947 ನೇ ಜುಲೈ ಮಾಹೆ ಒಂದರ ಲಾಗಾಯ್ತು 1948 ನೇ ಜೂನ್ ಮಾಹೆ ಆಖೈರು ವರೆಗೆ ಒಂದು ವರ್ಷ ಕಾಲ ಹೋಟಲು ಇಟ್ಟುಕೊಂಡು, ವ್ಯಾಪಾರಮಾಡುವ ಒಗ್ಗೆ ಮಾಹೆಯಾಯಾ ಬಾಡಿಗೆಗೆ ಪಡೆಯುವ ಹಕ್ಕನ್ನು ಪಡೆಯಲು ಇಷ್ಟವುಳ್ಳವರು ಜಾಲ್ತಿ ಮಾಹೆ ತಾರೀಖು 16 ನೇ ಸೋಮವಾರ ಮಧ್ಯಾಹ್ನ 4 ಗಂಟೆ ಅಥವಾ ಅದಕ್ಕೆ ಮುಂಚಿತವಾಗಿ ತಮ್ಮ ಟೆಂಡರುಗಳನ್ನು ಮುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರ ಆಫೀಸಿನಲ್ಲಿ ಹಾಜರುಮಾಡಬಹುದಾಗಿರುತ್ತೆ. ಹೆಚ್ಚಿಗೆ ವಿಷಯಗಳನ್ನು ಆಫೀಸಿನಲ್ಲಿ ಆಫೀಸು ನಡೆಯುವ ಕಾಲದಲ್ಲಿ ತಿಳಿಯಬಹುದು.

(ಸಹಿ) ಎಸ್. ಮುರುಘೇಂದ್ರಸ್ವಾಮಿ
ಫಾರ್ ಪ್ರೆಸಿಡೆಂಟ್

At Opera

8 ನೇ ವಾರ

ಟಿ. ಎಸ್. ಬಾಲಯ್ಯ,
ತಪಮಣಿದೇವಿ, ಮೂಲತಿ
ರಾಮಚಂದ್ರ ನಟಿಸಿರುವ

ಗಾಜಕ್ಕು ಮಾರಿ

(ತಮಿಳು)

'ಶಕ್ತಿಸುಧಾ' ಸೇವಿಸಿ ಶಕ್ತಿಯನ್ನು ಹೊಂದಿ

ಶ್ರೀ 'ಓಂ' ಗುರುತಿನ

ಅರಿಸಿದ ಪರಿಶುದ್ಧ ಕೇಸರಿ

ಈ ಶ್ರೀ ಓಂ ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯ ಕೇಸರಿ ಗಿಡಗಳಿಂದ ಅರಿಸಲ್ಪಟ್ಟ ಹೂಗಳಿಂದ ಕಿತ್ತಲ್ಪಟ್ಟು ಅರಿಸ ತೆಗೆಯಲ್ಪಟ್ಟಿದಾಗಿದೆ. ಇದರಲ್ಲಿ ಏನೆಂದು ಆಕ್ಷೇಪಣೀಯ ಪದಾರ್ಥವೂ ಸೇರಿಲ್ಲ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾದುದು. ದೇವಾಲಯಗಳಲ್ಲಿಯೂ ದೇವರ ಪೂಜೆಗೂ ಮತ್ತಿತರ ಸಮಾರಂಭಗಳಲ್ಲಿಯೂ ಎಲ್ಲ ಸಂತೋಷ ಮತ್ತು ಸಾಂಘಿಕ ಕೂಟಗಳಲ್ಲಿಯೂ ಉಪಯೋಗಿಸಲ್ಪಡತಕ್ಕದ್ದಾಗಿದೆ. ಎಂದು ಶಿಫಾರಸ್ ಮಾಡಲ್ಪಟ್ಟಿದೆ

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

ಗೋವಿಂದಪ್ಪ ನಾಯಕ್‌ರಸ್ತೆ, ಜಿ. ಟಿ. ಮದರಾಸು.